# ಕುವೆಂಪು ನಾಟಕಗಳಲ್ಲಿ ಪರಂಪರೆ ಮತ್ತು ಪ್ರತಿರೋಧದ ನೆಲೆಗಳು: ಒಂದು ಅಧ್ಯಯನ

ಗಿರಿಯಪ್ಪ*

DOI: https://doi.org/10.5281/zenodo.22107862

**ABSTRACT**

ರಾಷ್ಟ್ರಕವಿ ಕುವೆಂಪು ಅವರು ಶ್ರೇಣೀಕೃತ ಸಮಾಜದ ಪುರೋಹಿತಶಾಹಿ ಯಾಜಮಾನ್ಯವನ್ನು ಧಿಕ್ಕರಿಸಿ, ತಮ್ಮ ನಾಟಕಗಳ ಮೂಲಕ ಪ್ರಬಲವಾದ ಸಾಂಸ್ಕೃತಿಕ ಪ್ರತಿರೋಧವನ್ನು ಒಡ್ಡಿದ್ದಾರೆ. 'ಜಲಗಾರ', 'ಶೂದ್ರತಪಸ್ವಿ' ಹಾಗೂ 'ಬೆರಳ್ಗೆ ಕೊರಳ್' ನಾಟಕಗಳು ಕೇವಲ ಪೌರಾಣಿಕ ಮರುಸೃಷ್ಟಿಯಲ್ಲ; ಬದಲಾಗಿ ತಳಸಮುದಾಯಗಳ ಅಸ್ಮಿತೆಯ ತೀಕ್ಷ್ಣ ಅಭಿವ್ಯಕ್ತಿಗಳಾಗಿವೆ. 'ಜಲಗಾರ'ದಲ್ಲಿ ದೇವಾಲಯ ಕೇಂದ್ರಿತ ವೈದಿಕ ಪರಂಪರೆಯನ್ನು ನಿರಾಕರಿಸಿ, ಕಾಯಕ ತತ್ವವನ್ನು ಎತ್ತಿಹಿಡಿಯಲಾಗಿದೆ. 'ಶೂದ್ರತಪಸ್ವಿ'ಯಲ್ಲಿ ಶಂಬೂಕನ ಸಾಧನೆಯನ್ನು ಸಮರ್ಥಿಸಿ, ವರ್ಣಾಶ್ರಮದ ಕರಾಳತೆಯನ್ನು ವೈಚಾರಿಕವಾಗಿ ಪ್ರಶ್ನಿಸಲಾಗಿದೆ. ಅಂತೆಯೇ 'ಬೆರಳ್ಗೆ ಕೊರಳ್' ನಾಟಕದಲ್ಲಿ ಏಕಲವ್ಯನ ಕಥೆಯ ಮೂಲಕ ವಿದ್ಯೆಯ ಮೇಲಿನ ಪಟ್ಟಭದ್ರರ ಏಕಸ್ವಾಮ್ಯ ಹಾಗೂ ಶೋಷಣೆಯನ್ನು ಅನಾವರಣಗೊಳಿಸಲಾಗಿದೆ. ಒಟ್ಟಾರೆಯಾಗಿ, ಜಾತಿ ಮತ್ತು ಹುಟ್ಟಿನ ಆಧಾರಿತ ತಾರತಮ್ಯಗಳನ್ನು ಬೇರುಸಹಿತ ಕಿತ್ತೊಗೆದು, ಪ್ರತಿಭೆ, ಶ್ರದ್ಧೆ ಮತ್ತು ಮಾನವೀಯತೆಗೆ ಮನ್ನಣೆ ನೀಡುವ 'ಸರ್ವರಿಗೂ ಸಮಬಾಳು' ಎಂಬ ಸಮಸಮಾಜದ ಹೊಸ ದಾರ್ಶನಿಕತೆಯನ್ನು ಕುವೆಂಪು ಇಲ್ಲಿ ಅತ್ಯಂತ ಸೃಜನಶೀಲವಾಗಿ ಕಟ್ಟಿಕೊಟ್ಟಿದ್ದಾರೆ.

**KEYWORDS:** ಕುವೆಂಪು ನಾಟಕಗಳು, ಪರಂಪರೆ ಮತ್ತು ಪ್ರತಿರೋಧ, ಪುರೋಹಿತಶಾಹಿ ಯಾಜಮಾನ್ಯ, ವರ್ಣಾಶ್ರಮ ವ್ಯವಸ್ಥೆ, ಸಾಮಾಜಿಕ ಸಮಾನತೆ.

* **ಡಾ. ಗಿರಿಯಪ್ಪ**, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಬೆಸೆಂಟ್ ಮಹಿಳಾ ಕಾಲೇಜು, ಮಂಗಳೂರು.

ಆಧುನಿಕ ಕನ್ನಡ ಸಾಹಿತ್ಯದ ನವೋದಯ ಪರಂಪರೆಯಲ್ಲಿ ಕುವೆಂಪುರವರ ಸೃಜನಶೀಲ ಪ್ರತಿಭೆ ಅವಿಸ್ಮರಣೀಯವಾದದ್ದು. ಕುವೆಂಪುರವರ ಪ್ರಖರ ವೈಚಾರಿಕತೆ ಮತ್ತು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಹರಿಬಿಟ್ಟ ಚಿಂತನ ಕಿರಣಗಳು ಎಲ್ಲ ಕೃತಿಗಳಲ್ಲಿ ಎದ್ದು ಕಾಣುತ್ತಿವೆ. ಕುವೆಂಪುರವರು ಆಧುನಿಕ ಅಭಿರುಚಿಗೆ ತಕ್ಕಂತೆ ಅವುಗಳನ್ನು ಮಾರ್ಪಡಿಸಿಕೊಳ್ಳುವುದು ಕಾಲದ ಅನಿವಾರ್ಯತೆ ಎಂಬುದನ್ನು ಅವರು ಅರಿತಿದ್ದರು. ಈ ಕಾರಣಕ್ಕಾಗಿಯೇ ಪರಂಪರೆಯನ್ನು ಪ್ರತಿಬಿಂಬಿಸುವ, ಅಲ್ಲಿ ಒಪ್ಪಿಗೆಯಾಗದಿರುವ ಸಂಗತಿಗಳನ್ನು ಪರಿಷ್ಕರಿಸುವ ಪ್ರಬಲ ಪ್ರತಿರೋಧವನ್ನು ಒಡ್ಡುವ ಸಂದರ್ಭ, ಸನ್ನಿವೇಶಗಳನ್ನು ಕೃತಿಗಳಲ್ಲಿ ಸೃಷ್ಟಿಸಿಕೊಂಡಿರುವುದನ್ನು ಕಾಣಬಹುದು. ಕುವೆಂಪು ಉಳಿದವರಿಗಿಂತ ಭಿನ್ನವಾದ ಸವಾಲುಗಳನ್ನು ಎದುರಿಸಬೇಕಾಗಿತ್ತು. ಆಧುನಿಕ ಕನ್ನಡ ಸಾಹಿತ್ಯದ ಮೊದಲ ಶ್ರೇಷ್ಠ ಅವೈದಿಕ ಪ್ರತಿಭೆಯಾದ ಕುವೆಂಪು ತನ್ನ ಕಾಲದ ಸಾಂಸ್ಕೃತಿಕ ಯಾಜಮಾನ್ಯದ ವಿರುದ್ಧ, ಪುರೋಹಿತಶಾಹಿಗಳ ವಿರುದ್ಧ, ಪ್ರಧಾನ ಸಂಸ್ಕೃತಿ ಪ್ರತಿಪಾದಿಸುತ್ತಿದ್ದ ಮೌಲ್ಯಗಳ ವಿರುದ್ಧ ಸೆಣಸಬೇಕಾಗಿತ್ತು. ಭಿನ್ನ ಸಂಸ್ಕೃತಿಯಿಂದ ಬಂದ ಅವರು ಪ್ರಬಲವಾಗಿ ಬೇರೂರಿದ್ದ ಸಾಂಸ್ಥಿಕ ಶಕ್ತಿಯನ್ನು ಸೃಜನಶೀಲ ನೆಲೆಯಲ್ಲಿ ಸಮರ್ಥವಾಗಿ, ದೋಷರಹಿತವಾಗಿ ಎದುರಿಸಿರುವುದು ಹೆಗ್ಗಳಿಕೆಯ ವಿಚಾರ. ನೋಯುವ ಹಲ್ಲಿಗೆ ತುಡಿಯುವ ನಾಲಿಗೆಯಂತೆ ಆಧುನಿಕ ಸಂದರ್ಭದ ಕವಿಗಳಿಗೆ ಪುರಾಣದ/ಚರಿತ್ರೆಯ ವಸ್ತುಗಳನ್ನು ಬಳಸಿಕೊಂಡು ಪ್ರಸಕ್ತ ನಡೆಯುತ್ತಿರುವ ಜ್ವಲಂತ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವ ರೀತಿಯಲ್ಲಿ ನಾಟಕ ಕೃತಿಗಳನ್ನು ರಚಿಸಿದ್ದಾರೆ. ಈ ಮಾತುಗಳಿಗೆ ಕುವೆಂಪುರವರ ‘ಜಲಗಾರ’, ‘ಶೂದ್ರತಪಸ್ವಿ’ ಹಾಗೂ ‘ಬೆರಳ್ಗೆ ಕೊರಳ್’ ನಾಟಕಗಳು ಹೊರತಾದುದಲ್ಲ. ಪ್ರಸ್ತುತ ಲೇಖನದಲ್ಲಿ ಕುವೆಂಪು ಅವರ ನಾಟಕಗಳಲ್ಲಿ ಅನಾವರಣಗೊಂಡಿರುವ ಪರಂಪರೆ ಮತ್ತು ಪ್ರತಿರೋಧದ ನೆಲೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಕುವೆಂಪುರವರ ನಾಟಕಗಳು ಪ್ರಕಟಣೆಗೊಂಡ ವರ್ಷಗಳಿಗನುಗುಣವಾಗಿ 'ಜಲಗಾರ', 'ಶೂದ್ರತಪಸ್ವಿ' ಮತ್ತು 'ಬೆರಳ್ಗೆ ಕೊರಳ್' ಈ ಮೂರು ನಾಟಕಗಳನ್ನು ಮಾತ್ರ ಗಮನಿಸಲಾಗಿದೆ.

‘ಜಲಗಾರ’, ‘ಶೂದ್ರತಪಸ್ವಿ’, ‘ಬೆರಳ್ಗೆ ಕೊರಳ್’ ಈ ಮೂರು ನಾಟಕಗಳಲ್ಲಿ ಅವರು ತಾವು ವೈಯಕ್ತಿಕ ನೆಲೆಯಲ್ಲಿ ಎದುರಿಸುತ್ತಿದ್ದ ಸಮಸ್ಯೆಯನ್ನು ವಸ್ತುವಾಗಿ ಮಾಡಿಕೊಂಡು ತಾತ್ವಿಕ ನೆಲೆಯಲ್ಲಿ ಪ್ರಶ್ನಿಸುವ ಪ್ರಯತ್ನ ಮಾಡಿದ್ದಾರೆ. ಶಿಕ್ಷಣ ವಂಚಿತ ಜನಸಮುದಾಯದ ಪ್ರತಿನಿಧಿಯಾಗಿ ವ್ಯವಸ್ಥೆಗೆ ಮುಖಾಮುಖಿಯಾಗಿದ್ದಾರೆ. ಪ್ರಧಾನ ಸಂಸ್ಕೃತಿಗೆ ಪರ್ಯಾಯವಾದ ಸಾಧ್ಯತೆಗಳನ್ನು ಕಲ್ಪಿಸುವ ಚಿಂತನೆ ಈ ನಾಟಕಗಳ ಮೂಲ ದ್ರವ್ಯವಾಗಿದೆ.

‘ಜಲಗಾರ’ ನಾಟಕ ರಚನೆಯಾದದ್ದು 1928ರಲ್ಲಿ. ಈ ನಾಟಕವು ಕುವೆಂಪು ಅವರ ವರ್ಣಾಶ್ರಮ ವಿರೋಧೀ ನೆಲೆಯ ಪಯಣದ ಮೊದಲ ಹಂತದ ಕೃತಿ. ಇದರಲ್ಲಿ ವಚನಕಾರರ ಪ್ರಭಾವವನ್ನು ಗುರುತಿಸಬಹುದು. ಶಿವ ಶರಣರ ಕಾಯಕದ ಮಹತ್ವವನ್ನು ಕುವೆಂಪು ನಿರೂಪಿಸಿದ್ದಾರೆ. ‘ಜಲಗಾರ’ವು ವೈದಿಕ ವರ್ಣ ವ್ಯವಸ್ಥೆಯಲ್ಲಿ ದೇವರು ದೇವಾಲಯದ ಪರಿಕಲ್ಪನೆಯನ್ನು ವಿರೋಧಿಸುವ ನೆಲೆಯಲ್ಲಿ ರಚನೆಯಾದ ನಾಟಕ. ‘ಜಲಗಾರ’ ಎರಡು ದೃಶ್ಯಗಳ ಸಣ್ಣ ನಾಟಕ. ಮೊದಲನೆಯ ದೃಶ್ಯ ದೇವಸ್ಥಾನಕ್ಕೆ ಹೋಗುವ ದೃಶ್ಯವಾದರೆ, ಎರಡನೆಯ ದೃಶ್ಯ ದೇವಸ್ಥಾನದಿಂದ ಹಿಂದಿರುಗಿ ಬರುವ ದೃಶ್ಯ. ದೇವಸ್ಥಾನ ನಾಟಕದ ಕೇಂದ್ರಬಿಂದು. ದೇವಸ್ಥಾನದ ಪರಿಕಲ್ಪನೆಯನ್ನು ಕುವೆಂಪು ಇಲ್ಲಿ ಆಧುನಿಕ ಸಂದರ್ಭದ ಇಪ್ಪತ್ತನೆಯ ಶತಮಾನದ ಸಾಮಾಜಿಕ ತಲ್ಲಣಗಳೊಂದಿಗೆ ವ್ಯಾಖ್ಯಾನಿಸುವ ಕೆಲಸ ಮಾಡಿದ್ದಾರೆ. ದೇವಾಲಯಕ್ಕೆ ಹೋಗುವ ಮತ್ತು ತಿರುಗಿ ಬರುವ ದೃಶ್ಯಗಳ ಮೂಲಕ

ಪರಂಪರೆಯೊಂದನ್ನು ತೆರೆದು ತೋರಿದ್ದಾರೆ. ಪೂರ್ವಿಕರಿಂದ ಬಂದ ಆಸ್ತಿ ಎಂಬಂತೆ ಯಾರ ಹಂಗೂ ಇಲ್ಲದೆ ದೇವಾಲಯಗಳೊಂದಿಗೆ ನಡೆದುಕೊಳ್ಳುವ ವೈದಿಕರು ಒಂದೆಡೆಯಾದರೆ, ಆ ದೇವಾಲಯಗಳಿಗೂ ತಮಗೂ ಸಂಬಂಧವೇ ಇಲ್ಲವೆಂದು ಅವುಗಳಿಂದ ದೂರವಿದ್ದು ತಮ್ಮ ಕಾಯಕದಲ್ಲಿಯೇ ಕೈಲಾಸವನ್ನು, ಶಿವನನ್ನು ಕಾಣುವ ತಳ ಸಮುದಾಯದ ಜನರು ಮತ್ತೊಂದೆಡೆ ಕಂಡುಬರುತ್ತಾರೆ. 'ಜಲಗಾರ' ನಾಟಕದಲ್ಲಿ ಬರುವ ರೈತ ಮತ್ತು ಜಲಗಾರ ಇಬ್ಬರೂ ಸಮಾಜದ ಕಾಯಕ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಾರೆ. ಆದರೂ ರೈತ ಶ್ರೇಣೀಕೃತ ಸಮಾಜದ ನಿಯಮಗಳನ್ನು ಪಾಲಿಸುವ ಪ್ರತಿನಿಧಿಯಂತೆ ಕಂಡುಬರುತ್ತಾನೆ. ಈತನ ಮೂಲಕ ನಮ್ಮ ಪರಂಪರೆಯನ್ನು ತೋರಿಸುವ ಪ್ರಯತ್ನವನ್ನು ಮಾಡಿದಂತೆ ಕಾಣುತ್ತದೆ. ಜಲಗಾರ ಈ ನಾಟಕದ ವೈದಿಕ ಸಂಸ್ಕೃತಿಯ ನಿಯಮಗಳನ್ನು ವಿರೋಧಿಸುವ, ಅವರ ಪರಂಪರೆಗೆ ಪ್ರತಿರೋಧವನ್ನು ವ್ಯಕ್ತಪಡಿಸುವ ಪ್ರತಿಭಟನಾಕಾರನಾಗಿ ಕಾಣಿಸುತ್ತಾನೆ. 'ನೇಗಿಲ ಗೆರೆಯೇ ತೋರುವುದೆನಗೆ ಮುಕ್ತಿಯ ಹಾದಿಯನು' ಎಂಬ ಸಾಲುಗಳು ಕಾಯಕ ತತ್ವವನ್ನು ಪ್ರತಿಪಾದಿಸುತ್ತದೆ.

ನಾಟಕದಲ್ಲಿ ಬರುವ 'ರೈತ' ಮತ್ತು 'ಜಲಗಾರ' ಇವರುಗಳ ಸಂಭಾಷಣೆಯಲ್ಲಿ ತಳಸಮುದಾಯದವರಿಗೆ ನಿಷಿದ್ಧವಾಗಿರುವ ದೇವಾಲಯ ಪ್ರವೇಶದಂತಹ ಸಂಗತಿಯನ್ನು ಸಾಮಾಜಿಕ ಅನಿಷ್ಟವೆಂದು ಕುವೆಂಪು ಪರಿಗಣಿಸಿದ್ದಾರೆ. ನಾಟಕದಲ್ಲಿ ಬರುವ ಸಂಭಾಷಣೆಯಾದ "ಜೋಯಿಸರು ದೇಗುಲದ ಒಳಗೆನ್ನ ಸೇರಿಸರು. ನಿನ್ನೆ ದೇಗುಲದೆಡೆಗೆಡೆಗೆ ಹೋದ ಕಂದನಂ ಬೈದಿರಿದು ನೂಕಿದರು" ಎಂಬಂತಹ ಮಾತುಗಳು ತಲತಲಾಂತರದಿಂದ ನಡೆದು ಬಂದಿರುವಂತಹ ಪರಂಪರೆಯ ಮುಂದುವರಿಕೆಯಾಗುತ್ತಿದೆ ಎಂಬುದಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಇದಕ್ಕೆ ಪ್ರತಿಭಟನೆಯ ನೆಲೆಯಾಗಿ "ನನ್ನಲ್ಲಿಯೇ ದೇವರಿರ್ದಾನೆ ನಾನೇ ದೇವರು" ಎಂಬುದನ್ನು ಜಲಗಾರನ ಪಾತ್ರದ ಮೂಲಕ ಪ್ರತಿಷ್ಠಾಪಿಸುತ್ತ ಹೋಗಿರುವುದು ಒಂದು ಹೊಸ ಪರಿಕಲ್ಪನೆಯೇ ಆಗಿದೆ. "ನೇಗಿಲ ಗೆರೆಯೇ ತೋರಿವುದೆನಗೆ ಮುಕ್ತಿಯ ಹಾದಿಯನು" ಎಂದು ಹಾಡಿದ ರೈತ ತನ್ನ ಹಾಡಿನ ವಿರುದ್ಧವಾಗಿ ದೇವಾಲಯಕ್ಕೆ ಹೋಗುವಾಗ ಜಲಗಾರನನ್ನು ಕರೆಯುವುದು ಸವರ್ಣೀಯನ ನಡೆ ಮತ್ತು ನುಡಿಯಲ್ಲಿ ವ್ಯತ್ಯಾಸವಿರುತ್ತದೆಂಬುದನ್ನು ತೋರಿಸುತ್ತದೆ. ಪುರೋಹಿತಶಾಹಿಗಳ ಈ ರೀತಿಯ ನಡವಳಿಕೆಗಳನ್ನು ನಾಟಕದಲ್ಲಿ ತಂದು ಅವರ ಪರಂಪರಾಗತ ಸಂಸ್ಕೃತಿಗೆ ಈ ರೀತಿಯ ಸಂಭಾಷಣೆಯ ಮೂಲಕ ಪ್ರತಿರೋಧ ಒಡ್ಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಸ್ವ ಸಂತೋಷಕ್ಕಾಗಿ ಹಾಡಿಕೊಳ್ಳುತ್ತಿರುವ ಜಲಗಾರನ ಹಾಡಿನ ವಿಷಯವಾಗಿ ಬ್ರಾಹ್ಮಣ ಯುವಕರಿಬ್ಬರಲ್ಲಿ ನಡೆದ ಸಂಭಾಷಣೆ ಸಂಘರ್ಷಮಯವಾಗಿದೆ. ತಳ ಸಮುದಾಯದ ಜಲಗಾರನಲ್ಲಿ ಇಷ್ಟೊಂದು ಮಧುರವಾಗಿ ಹಾಡುವ ಪ್ರತಿಭೆ ಇರಲು ಹೇಗೆ ಸಾಧ್ಯ ಎಂಬ ಪ್ರಶ್ನೆಯೊಂದಿಗೆ ಹುಟ್ಟು ಮತ್ತು ಪ್ರತಿಭೆಗೆ ತಾಳೆ ನೋಡುತ್ತ ಬಂದ ಪುರೋಹಿತಶಾಹಿ ಪರಂಪರೆಯ ರೂಢಿಗತವಾದ ವ್ಯವಸ್ಥೆಗೆ ತೀಕ್ಷ್ಣವಾಗಿ ಕುವೆಂಪು ಪ್ರತಿಕ್ರಿಯಿಸಿದ್ದಾರೆ.

ಆಧುನಿಕ ಶಿಕ್ಷಣ ವ್ಯವಸ್ಥೆ ಶೂದ್ರರಿಗೂ ತನ್ನ ಬಾಗಿಲನ್ನು ತೆರೆಯಿತು. ಶೂದ್ರ ಸಮುದಾಯದಲ್ಲಿ ಜನಿಸಿ ಅಪರೂಪದ ಪ್ರತಿಭೆಯ ವಕ್ತಾರರೆಂದು ಖ್ಯಾತರಾದ, ಕನ್ನಡ ಸಾರಸ್ವತ ಲೋಕಕ್ಕೆ ಅನರ್ಘ್ಯರತ್ನವೆನಿಸಿದ ಕುವೆಂಪುರವರು ಸಾರ್ವಜನಿಕ ವಲಯದಲ್ಲಿ ಶೂದ್ರರ ಮೇಲಾಗುತ್ತಿದ್ದ ಪುರೋಹಿತ ಶಾಹಿಗಳ ದೌರ್ಜನ್ಯಗಳನ್ನು ಸಾಹಿತ್ಯ ಕೃತಿಗಳ ಮುಖೇನ ಹಿಮ್ಮೆಟ್ಟಿಸುವ ಕೈಂಕರ್ಯದಲ್ಲಿ ತೊಡಗಿಕೊಂಡರು. 'ಜಲಗಾರ' ನಾಟಕದಲ್ಲಿ ಪ್ರತಿಭೆಯ ಕುರಿತ ಜಿಜ್ಞಾಸೆಯನ್ನು ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾರೆ.

ಕುತೂಹಲಕರವಾದ ಅಂಶವೆಂದರೆ 'ಜಲಗಾರ' ನಾಟಕದಲ್ಲಿ ಕುವೆಂಪು ಯಾವುದನ್ನು ಪ್ರಜ್ಞಾಪೂರ್ವಕವಾಗಿ ವಿರೋಧಿಸುತ್ತಾರೋ, ಅದನ್ನೇ ಸಮರ್ಥಿಸುವ ಮನೋಭಾವವೂ ನಾಟಕದಲ್ಲಿ ವ್ಯಕ್ತವಾಗುತ್ತದೆ. ಜಲಗಾರ ನಾಟಕದಲ್ಲಿ ಒಂದು ಕಡೆ ಶ್ರೇಣೀಕೃತ ಸಮಾಜದ ಜಾತಿವ್ಯವಸ್ಥೆ ಬಗ್ಗೆ ಕಡುವಿರೋಧ ವ್ಯಕ್ತವಾದರೆ ಮತ್ತೊಂದು ಕಡೆ ಇದೇ ವ್ಯವಸ್ಥೆ ಪ್ರತಿಪಾದಿಸುವ ಕರ್ಮಸಿದ್ಧಾಂತದ ಬಗ್ಗೆ ನಂಬಿಕೆ ವ್ಯಕ್ತವಾಗುತ್ತದೆ. 'ಕರ್ಮ ಮುಗಿಯುವ ಕಾಲ ಮುಗಿದಿಲ್ಲವಿನ್ನೂ' ಎಂದು ಜಲಗಾರ ಹೇಳುವ ಮಾತುಗಳನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು. ಕುವೆಂಪುರವರು ಗಾಂಧೀಜಿ, ರಾಮಕೃಷ್ಣ ಪರಮಹಂಸ, ವಿವೇಕಾನಂದರ ಪ್ರಭಾವ ಕರ್ಮಸಿದ್ಧಾಂತ, ಆಧುನಿಕ ಶಿಕ್ಷಣದ ಫಲವಾಗಿ ಬದಲಾಗುತ್ತಿದ್ದ ಸಾಮಾಜಿಕ ಪರಿಸರ ಶೂದ್ರ ಚಳುವಳಿ ಇವೆಲ್ಲವೂ ಕುವೆಂಪು ವ್ಯಕ್ತಿತ್ವವನ್ನು ಏಕಕಾಲದಲ್ಲಿ ಪ್ರಭಾವಿಸಿದ ಸಂಗತಿಗಳು. ಜಲಗಾರ ನಾಟಕದಲ್ಲಿ ವರ್ಣಾಶ್ರಮ ಪದ್ಧತಿಯಲ್ಲಿ ದಬ್ಬಾಳಿಕೆಗೆ ಒಳಗಾದ ಕೆಳತುದಿಯ ವ್ಯಕ್ತಿಗೆ ಸಾಮಾಜಿಕ ನ್ಯಾಯ ದೊರೆಯದಿದ್ದರೂ ಭಗವಂತ ಕರುಣಿಸಿ ಆಶ್ರಯ ನೀಡುತ್ತಾನೆ ಎಂಬ ಭಾವ ಸಮಾಧಾನದ ಚಿತ್ರವನ್ನು ಮಹಾಕವಿ ಕುವೆಂಪು ನೀಡಿದ್ದಾರೆ.

ಪರಂಪರೆ ಮತ್ತು ಪ್ರತಿರೋಧಕ ಹಿನ್ನೆಲೆಯಲ್ಲಿ ನಾನು ಆಯ್ಕೆ ಮಾಡಿಕೊಂಡ ಕುವೆಂಪುರವರ ಮತ್ತೊಂದು ನಾಟಕ 'ಶೂದ್ರತಪಸ್ವಿ'. ಈ ನಾಟಕವು ಮೊದಲ ಮುದ್ರಣ ಕಂಡದ್ದು 1944ರಲ್ಲಿ. ಈ ನಾಟಕದ ವಸ್ತು ವಾಲ್ಮೀಕಿ ರಾಮಾಯಣದ ಉತ್ತರ ಕಾಂಡದ 'ಶಂಬೂಕ ಪ್ರಸಂಗ'. ಶೂದ್ರತಪಸ್ವಿಯಲ್ಲಿ ಮೂರು ದೃಶ್ಯಗಳಿವೆ. ಮೊದಲ ದೃಶ್ಯದಲ್ಲಿ ವೃಕ್ಷ ವೈಭವ ಹಾಗೂ ಮೃತ್ಯು ದೇವತೆಯ ಸಂವಾದವಿದೆ. ಎರಡನೆಯ ದೃಶ್ಯದಲ್ಲಿ ಬ್ರಾಹ್ಮಣನ ಪುತ್ರಶೋಕ ಹಾಗೂ ಅದಕ್ಕೆ ಕಾರಣನಾದವನನ್ನು ಶ್ರೀರಾಮ ಶಿಕ್ಷಿಸಲು ಹೊರಡುವ ಚಿತ್ರಣವಿದ್ದರೆ, ಮೂರನೆಯ ದೃಶ್ಯದಲ್ಲಿ ಶ್ರೀರಾಮ ಅಪರಾಧಿಗೆ ಶಿಕ್ಷೆ ನೀಡುವ ಸನ್ನಿವೇಶವಿದೆ. ಶಂಬೂಕ ಪ್ರಸಂಗದ ವಸ್ತು 'ಶೂದ್ರತಪಸ್ವಿ'ಯಾಗಿ ರೂಪಾಂತರಗೊಳ್ಳುವಾಗ ಕುವೆಂಪು ಸೃಷ್ಟಿಸುವ ನಾಟಕೀಯ ಸನ್ನಿವೇಶ ಅವರ ದೃಶ್ಯ ಪ್ರತಿಭೆಗೆ ಉತ್ತಮ ನಿದರ್ಶನವನ್ನು ಒದಗಿಸುತ್ತದೆ.

'ಶೂದ್ರತಪಸ್ವಿ' ನಾಟಕ ಪಾರಂಪರಿಕವಾಗಿ ಬಂದ ಚಾತುರ್ವರ್ಣ ಪದ್ಧತಿಯ ಮೌಲ್ಯಗಳನ್ನು ಪಲ್ಲಟಗೊಳಿಸುವ ಒಂದು ವಿನೂತನ ಪ್ರಯೋಗವಾಗಿದೆ. ಕುವೆಂಪುರವರು ಹೊಸ ಮೌಲ್ಯಗಳ ಅನುಷ್ಠಾನಕ್ಕೆ ಅವಕಾಶವನ್ನು ಕಲ್ಪಿಸುವ ನಿಟ್ಟಿನಲ್ಲಿ ತಮ್ಮ ವೈಚಾರಿಕ ನಿಲುವನ್ನು ಪ್ರತಿಪಾದಿಸಿದ್ದಾರೆ. ಆಧುನಿಕ ಸಂದರ್ಭದ ಹೊಸ ಚಿಂತನಾ ಕ್ರಮಕ್ಕೆ ಒಂದು ಸಮರ್ಥ ಪ್ರತಿಮೆಯಾಗಿದೆ. ನಾಟಕದಲ್ಲಿ ಶಂಭೂಕನಂಥ ಶೂದ್ರ ತಪಸ್ಸು ಮಾಡಿದುದಕ್ಕೆ ಧರ್ಮ ಮುನಿದು ಶಾಪವಾಗಿ ತನ್ನ ಮಗ ಸತ್ತಿದ್ದಾನೆಂದು ಪ್ರತಿಪಾದಿಸುವ ಬ್ರಾಹ್ಮಣನ ಪಾತ್ರದ ಮೂಲಕ ವೈದಿಕ ಜಡ ಸಂಸ್ಕೃತಿಯ ಕರಾಳ ಮುಖವನ್ನು ಪ್ರದರ್ಶಿಸಿದ್ದಾರೆ. ಬ್ರಾಹ್ಮಣನೊಂದಿಗೆ ತೀವ್ರವಾಗಿ ಪ್ರಶ್ನಿಸುವ ರಾಮನ ಪಾತ್ರದಲ್ಲಿ ಕುವೆಂಪುರವರ ವೈಚಾರಿಕತೆ ಪ್ರತಿಬಿಂಬಿತವಾಗಿದೆ. ಬ್ರಾಹ್ಮಣ ಮತ್ತು ರಾಮ ಇವರೀರ್ವರಲ್ಲಿ ನಡೆದ ಸಂಭಾಷಣೆಯಲ್ಲಿ ಕುವೆಂಪು ಅವರು ಆಧುನಿಕ ಸಂದರ್ಭದ ಪರಂಪರೆಗೆ ಒಡ್ಡಿದ ಪ್ರತಿರೋಧವನ್ನು ಕಾಣಬಹುದು.

ಸಮಾಜದಲ್ಲಿ ಬ್ರಾಹ್ಮಣನೊಬ್ಬನು ಶೂದ್ರನಿಗೆ ನಮಸ್ಕರಿಸುವುದು ಸಾಮಾಜಿಕ ನಿಷಿದ್ಧ. ಈ ಅನಿಷ್ಟಗಳು ಪರಂಪರಾಗತವಾಗಿ ನಡೆದುಕೊಂಡು ಬಂದುದು. ಶೂದ್ರ ತಪಸ್ಸು ಮಾಡುವುದು ಅಧರ್ಮ ಎಂದು ಹೇಳಿ ಈ ರೀತಿಯಾದ ವರ್ಣಾಶ್ರಮ ಧರ್ಮವನ್ನು ಉಲ್ಲಂಘಿಸಿರುವುದಕ್ಕಾಗಿ ಬ್ರಾಹ್ಮಣ ಬಾಲಕ ಬಲಿಯಾದ ಎಂದು ಹೇಳುವ ಬ್ರಾಹ್ಮಣನ ಮಾತಿನಲ್ಲಿ ತಲತಲಾಂತರದಿಂದ ಹರಿದು ಬಂದಿರುವ ವೈದಿಕ ಪರಂಪರೆ ಮತ್ತು ಮನಸ್ಥಿತಿ

ಪ್ರಕಟವಾಗಿದೆ. ಬ್ರಾಹ್ಮಣ ಬಾಲಕ ಬದುಕಿದ್ದರೆ ಅವನ ಉತ್ತಮ ಕುಲದೊಂದಿಗೆ ಶಾಸ್ತ್ರ ರಚನೆ, ಕಾವ್ಯಕಟ್ಟುವಿಕೆ, ತಪಸ್ಸು, ಧರ್ಮ ಪರಿಪಾಲನೆಯಂಥ ಘನ ಕಾರ್ಯಗಳನ್ನು ಮಾಡಬಹುದಿತ್ತು. ಇವೆಲ್ಲ ಪುರೋಹಿತಶಾಹಿಯ ಜಡಸಂಸ್ಕೃತಿಯಲ್ಲಿ ತಮಗೆ ಮಾತ್ರ ಮೀಸಲಾದ ಕಾರ್ಯಗಳೆಂದು ಪರಂಪರಾಗತವಾಗಿ ಪ್ರತಿಪಾದಿಸುತ್ತಲೇ ಬರಲಾಗಿದೆ. ಈ ರೀತಿಯ ನಿಲುವಳಿಕೆಗಳನ್ನು ಖಡಾಖಂಡಿತವಾಗಿ ತುಂಡರಿಸುವ ಕೆಲಸವನ್ನು ಕುವೆಂಪುರವರೇ ರಚಿಸಿದ 'ಗೊಬ್ಬರ' ಕವನವನ್ನು ಅವಲೋಕಿಸಬಹುದು. ಆದರೆ ಸತ್ತ ಬಾಲಕ ಬದುಕಿದ್ದರೆ ಇವೆಲ್ಲ ಮಾಡಬಹುದಿತ್ತೆಂದು ಭ್ರಮಿಸುವ ಬ್ರಾಹ್ಮಣ, ಬದುಕಿ ಆ ಸಾಧನೆಯನ್ನು ಮಾಡಿ ತೋರಿದ ಶೂದ್ರನ ತಪಶ್ಶಕ್ತಿಯನ್ನು ಒಪ್ಪಲು ಸಿದ್ಧನಿಲ್ಲ. ಅಲ್ಲದೆ ಈ ತಪಸ್ಸು ಮಾಡಿರುವುದರಿಂದಲೇ ಬ್ರಾಹ್ಮಣ ಬಾಲಕ ಸಾವಿನಂಥ ಅನಾಹುತ ಸಂಭವಿಸಿದೆ ಎಂದು ವಿವರಣೆ ನೀಡುವಲ್ಲಿ ಪರಂಪರೆಗೆ ಪುಷ್ಟಿ ನೀಡುತ್ತ ಹಳೆ ಬೇರು ಹೊಸ ಚಿಗುರು ಅನ್ನುವಂತೆ ಪರಂಪರೆಯನ್ನು ಮುಂದುವರಿಸುವ ರೀತಿಯನ್ನು ಕಾಣಬಹುದು.

ಆದರೆ ಕುವೆಂಪುರವರು ವೈದಿಕರ ವ್ಯಾಖ್ಯಾನಕ್ಕೆ ವಿರುದ್ಧವಾಗಿ ಮಹಾಯೋಗಿಯಾದ ಶಂಬೂಕನಂಥ "ತಪಸ್ವಿಯ ತಿರಸ್ಕೃತಿಗೆ ಮುನಿದ ಧರ್ಮಂ ತಂದುದೀತನ ಮುದ್ದು ಕಂದಂಗೆ ಮರಣಂ" ಎಂದು ಹೇಳಿದ್ದಾರೆ. ಧರ್ಮ ಶಾಸ್ತ್ರಗಳ ವಿವರಣೆ ಅವರವರು ಪರಿಭಾವಿಸುವ ರೀತಿಯಲ್ಲಿ ಅರ್ಥೈಸುವ ಕ್ರಮ ಇದ್ದೇ ಇರುತ್ತದೆ. ಈ ನಾಟಕದಲ್ಲಿ ಬ್ರಾಹ್ಮಣ ಕೊಡುವ ಧರ್ಮದ ವ್ಯಾಖ್ಯಾನಕ್ಕೆ ನೀಡಿದ ಪ್ರತಿಕ್ರಿಯೆ ಪುರೋಹಿತಶಾಹಿ ಮನಸ್ಸುಗಳಿಗೆ ಒಡ್ಡುವ ಪ್ರತಿರೋಧದ ನೆಲೆಯನ್ನು ಕಾಣಬಹುದು.

ಮಾನವನ ಸಾಧನೆಗೆ ಜಾತಿ, ಕುಲ, ಧರ್ಮ ಲಿಂಗ ಯಾವುದೂ ಮುಖ್ಯವೆನಿಸುವುದಿಲ್ಲ. ಸಾಧನೆಯ ಹಾದಿ ತುಳಿದವರು ಅದನ್ನು ಮಾನ್ಯ ಮಾಡಬೇಕು, ಗೌರವಿಸಬೇಕು. ಸಮಾಜದಲ್ಲಿಯ ಕುಲ ಕಾರಣವಾಗಿ ಹುಟ್ಟಿಕೊಂಡ ಅಸಮಾನತೆ ದೂರಾಗಬೇಕೆಂಬುದು ಕುವೆಂಪುರವರ ನಿಲುವಾಗಿತ್ತು. ಅವರು ಮಾಡಿದ ಸಾಧನೆ ಕುಲವನ್ನು ಮೀರಿದುದಾಗಿತ್ತು. ಈ ಬದಲಾವಣೆ ತೀವ್ರವಾಗಿ ಸಮಾಜವನ್ನು ವ್ಯಾಪಿಸಬೇಕೆಂದು ಅವರು ಬಯಸಿದ್ದರು. ಇಂಥ ಚಿಂತನೆಗಳನ್ನೊಳಗೊಂಡ ರಾಮನ ಮಾತನ್ನು ಕೇಳಿದ ಬ್ರಾಹ್ಮಣರ ದುಃಖ ಇಮ್ಮಡಿಸುತ್ತದೆ. ಆಗ ರಾಮನೂ ಬ್ರಾಹ್ಮಣ ದುಃಖಕ್ಕೆ ಕರಗುತ್ತಾನೆ. ದುಃಖ ಯಾರದೇ ಆಗಿರಲಿ, ಅದಕ್ಕೆ ಮನ ಕರಗುವುದು ಧರ್ಮವೆಂದು ಹೇಳುವ ಕುವೆಂಪು ಧರ್ಮದ ವ್ಯಾಖ್ಯಾನವನ್ನು ಸರಳೀಕರಿಸಿದರು. ಆ ಧರ್ಮಕ್ಕೆ ವೈದಿಕರು ಕೊಡುವ ವ್ಯಾಖ್ಯಾನವೇ ಬೇರೆಯಾಗಿತ್ತು. ಅಲ್ಲದೆ ಧಾರ್ಮಿಕ ನಂಬಿಕೆಯ ಕುರಿತಾದ ವ್ಯಾಖ್ಯಾನ, ನಂಬಿಕೆಗಳನ್ನು ಸರ್ವರೂ ಒಪ್ಪಬೇಕು ಎಂಬುದನ್ನು ಚರಿತ್ರೆಯುದ್ದಕ್ಕೂ ಪ್ರತಿಪಾದಿಸಿದರು. ಇದನ್ನೇ ಕುವೆಂಪು ತಮ್ಮ ನಾಟಕ ಮಾತ್ರವಲ್ಲ ಇತರ ಕೃತಿಗಳಲ್ಲೂ ಅನಾವರಣಗೊಳಿಸಿದ್ದಾರೆ. ತಪಸ್ಸು ಎಂಬುದು ಏಕಾಗ್ರತೆಯ ಒಂದು ವಿದ್ಯೆ. ಅದನ್ನು ಯಾರು ಬೇಕಾದರೂ ಕೈಗೊಳ್ಳಬಹುದು. ಆ ತಪಸ್ಸನ್ನು ಮಾಡಿದವರೆಲ್ಲರೂ ಪೂಜನೀಯರು. ಮನ್ನಣೆಗೆ ಮತ್ತು ಗೌರವಕ್ಕೆ ಪಾತ್ರರು. ನಾಟಕದಲ್ಲಿ, ತಪಸ್ಸಿಗೆ ಶೂದ್ರರು ಅನರ್ಹರು ಎಂಬುದಕ್ಕೆ ಸನಾತನಿಗಳು ಕೊಡುವ ಧರ್ಮಶಾಸ್ತ್ರಗಳ ಆಧಾರ, ಅವುಗಳನ್ನು ತಮ್ಮ ಮೂಗಿನ ನೇರಕ್ಕೆ ನಿರೂಪಿಸುವ ಅವರ ಇಡೀ ಸಂಸ್ಕೃತಿಯ ಕ್ರಮವನ್ನು ಕುವೆಂಪು ನಾಟಕದ ಪಾತ್ರಗಳ ಮೂಲಕ ಪ್ರಶ್ನಿಸುವ ರೀತಿ ನಿಜವಾಗಿಯೂ ಪ್ರತಿರೋಧವೆನಿಸಿವೆ. ಆರಂಭದಿಂದಲೂ ವೇದಶಾಸ್ತ್ರಗಳಲ್ಲಿರುವ ಹುಳುಕುಗಳನ್ನು ನಿರಾಕರಣೆ ಮಾಡುತ್ತಲೇ ಬಂದ ಕುವೆಂಪು ಅವರಿಗೆ ಅದಕ್ಕೆ ಅದೇ ರೂಪದಲ್ಲಿ ಹೊಸ ಬದುಕು ಸಾಧ್ಯವಿಲ್ಲವೆಂದು ಅರಿತಿದ್ದರು. ಈ ಕಾರಣಕ್ಕಾಗಿಯೇ ತಮ್ಮ ಹೊಸ ಚಿಂತನೆ, ದೃಢವಾದ ನಿಲುವು, ಸಾಮಾಜಿಕ ನ್ಯಾಯ

ಇವುಗಳನ್ನು 'ಶೂದ್ರತಪಸ್ವಿ' ನಾಟಕದಲ್ಲಿ ಸಾಕಾರಗೊಳಿಸಿದರು. ಶ್ರೀರಾಮನ ಪಾತ್ರದ ಮೂಲಕ ಛಿದ್ರವಾಗಿದ್ದ ಆಧುನಿಕ ಚಿಂತನೆಗಳು ಬ್ರಾಹ್ಮಣನ ಮನಸ್ಸಿನಲ್ಲಿ ಬದಲಾವಣೆಗಳನ್ನು ತರುತ್ತವೆ. ಕುವೆಂಪು ಬಯಸಿರುವುದು ಇದೇ ರೀತಿಯ ಬದಲಾವಣೆಗಳನ್ನು.

"ಆರಾದರೇನ್ ಆರಾಧ್ಯರ್ ತಪೋಧನರ್ ನಮಸ್ಕಾರಮೆ ಪುಣ್ಯಂ ತಿರಸ್ಕಾರಮೆ ಪಾಪಂ"

ಇದು 'ಶೂದ್ರತಪಸ್ವಿ' ನಾಟಕದ ಒಟ್ಟು ಆಶಯ. 'ಶೂದ್ರತಪಸ್ವಿ' ವರ್ಣಭೇದ ನೀತಿಯನ್ನು ವಿರೋಧಿಸುವ ಶ್ರೇಣೀಕರಣ ಸಮಾಜದ ವ್ಯವಸ್ಥೆಯ ಮೌಲ್ಯಗಳನ್ನು ತಿರಸ್ಕರಿಸಿ ಹೊಸ ಮೌಲ್ಯಗಳನ್ನು ಹುಟ್ಟು ಹಾಕುವ ಆಶಯವಿಟ್ಟುಕೊಂಡಿದ್ದರೂ ಸಂಪ್ರದಾಯ ಬದ್ಧರಿಗೆ, ಶಾಸ್ತ್ರ ಅನುಕರಣೀಯರಿಗೆ, ಜಾತಿಯ ಮದವೇರಿದವರಿಗೆ ತಿರುಗೇಟು ನೀಡುವುದು, ಪರಂಪರೆಯನ್ನು ತಲತಲಾಂತರದವರೆಗೂ ಮುಂದುವರೆಸಿಕೊಂಡು ಹೋಗಬೇಕೆನ್ನುವ ವೈದಿಕರ ತುಡಿತಗಳಿಗೆ ಬದಲಾವಣೆಯ ಗಾಳಿ ಬೀಸಬೇಕು ಎಂಬುದು ಕುವೆಂಪುರವರ ಆಶಯವಾಗಿತ್ತು. ಈ ಪರಂಪರೆಯಲ್ಲಿ ವೈದಿಕರಿಗೆ ಪ್ರತ್ಯೇಕವೆನಿಸುವ ಮೌಲ್ಯವೆನಿಸಿಕೊಂಡವುಗಳನ್ನು ಪರಿಷ್ಕರಿಸಿ ಹೊಸ ಮೌಲ್ಯಗಳ ಹುಟ್ಟು ಹಾಕುವ ಪುರಸ್ಕರಿಸುವ ಆಶಯವನ್ನಿಟ್ಟುಕೊಂಡ ಕುವೆಂಪುರವರ 'ಶೂದ್ರತಪಸ್ವಿ' ನಾಟಕ ಅಭೂತಪೂರ್ವ ಕೃತಿ, ಮಾತ್ರವಲ್ಲ ಕುವೆಂಪುರವರ 'ಶೂದ್ರತಪಸ್ವಿ' ನಾಟಕ ಅಭೂತಪೂರ್ವ ಕೃತಿ ಮಾತ್ರವಲ್ಲ ಕುವೆಂಪುರವರ ಕೃತಿರತ್ನಗಳಲ್ಲಿ 'ಶೂದ್ರತಪಸ್ವಿ' ನಾಟಕ ಕೃತಿ ಮಾಲಿಕೆ ಕೃತಿಗಳಲ್ಲಿ ಒಂದಾಗಿದೆ.

ಈ ಪ್ರಬಂಧದಲ್ಲಿ ಬಳಸಿಕೊಂಡ ಕುವೆಂಪುರವರ ಮೂರನೆಯ ನಾಟಕ 'ಬೆರಳ್ಗೆ ಕೊರಳ್' (1947) ಗೋವಿಂದ ಪೈಯವರಲ್ಲಿ 'ಹೆಬ್ಬೆರಳು' ಆಗಿ, ಡಾ. ಸಿದ್ದಲಿಂಗಯ್ಯನವರಲ್ಲಿ 'ಏಕಲವ್ಯ' ಎನ್ನುವ ನಾಮಾಂಕಿತದಿಂದ ರಚಿತವಾದ ನಾಟಕ. ಮಹಾಭಾರತದಲ್ಲಿ ಬರುವ ಏಕಲವ್ಯನ ಉಪಾಖ್ಯಾನಕ್ಕೆ ಹಲವು ಮಾರ್ಪಾಡುಗಳನ್ನು ಮಾಡಿಕೊಂಡ ಪೌರಾಣಿಕ ಕಥಾಹಂದರವುಳ್ಳ ನಾಟಕ. ಕುವೆಂಪುರವರ ವೈಚಾರಿಕತೆ ಹಾಗೂ ತಾತ್ವಿಕ ನಿಲುವಿನ ಸ್ವರೂಪವನ್ನು ಕುರಿತು ಮಾತನಾಡುವಾಗ ಈ ನಾಟಕವನ್ನು ಉಲ್ಲೇಖಿಸುವುದು ಸಾಮಾನ್ಯವಾಗಿದೆ. ನಾಟಕದಲ್ಲಿ ಬಳಕೆಯಾಗಿರುವ ವಸ್ತು, ಆಶಯ, ಆಕೃತಿ ಈ ಎಲ್ಲಾ ದೃಷ್ಟಿಯಿಂದಲೂ 'ಬೆರಳ್ಗೆ ಕೊರಳ್' ನಾಟಕಕ್ಕೆ ವಿಶೇಷವಾದ ಸ್ಥಾನವಿದೆ.

'ಬೆರಳ್ಗೆ ಕೊರಳ್' ಮಹಾಭಾರತದಲ್ಲಿ ಬರುವ ಏಕಲವ್ಯನ ಕಥಾನಕಕ್ಕೆ ಹಲವು ಮಾರ್ಪಾಡುಗಳನ್ನು ಮಾಡಿಕೊಂಡ ಒಂದು ದಾರ್ಶನಿಕ ನಾಟಕ. ಈ ನಾಟಕದಲ್ಲಿ ಮೂರು ದೃಶ್ಯಗಳಿವೆ. ಈ ಮೂರು ದೃಶ್ಯಗಳನ್ನು ಕುವೆಂಪು ಗುರು–ಕರ್ಮ–ಯಜ್ಞ ಎಂದು ಕರೆದಿದ್ದಾರೆ. ವಸಾಹತೋತ್ತರ ಚಿಂತನೆಯಲ್ಲಿ ನಾವು ಪ್ರಮುಖವಾಗಿ ಪ್ರಸ್ತಾಪಿಸುತ್ತಿರುವ ದೇಸಿ ಸತ್ವದ ಅರ್ಥಪೂರ್ಣ ಅಭಿವ್ಯಕ್ತಿಯಾಗಿ, ನಗರ ಸಂಸ್ಕೃತಿಯ ಸ್ವರೂಪ, ಸೃಜನಶೀಲ ಶಕ್ತಿಯನ್ನು ಹತ್ತಿಕ್ಕಲು ಅದು ನಡೆಸುವ ಹುನ್ನಾರ, ಉದಾತ್ತತೆಯ ಹೆಸರಿನಲ್ಲಿ ದೇಸಿ ಸತ್ವ ಅದಕ್ಕೆ 'ಬಲಿ'ಯಾಗುವ ಕ್ರಮ, ಬಹುಮುಖೀ ನೆಲೆಯ ದೇಸಿ ಪರಂಪರೆ ಮತ್ತೊಂದು ನೆಲೆಯಲ್ಲಿ ಅದನ್ನು ಎದುರಿಸಿ ಪ್ರತಿಭಟಿಸುವ ಬಗೆ ಈ ಎಲ್ಲಾ ಅಂಶಗಳು ನಾಟಕದಲ್ಲಿ ಅಭಿವ್ಯಕ್ತವಾಗಿವೆ. ಮಾತ್ರವಲ್ಲ ನಗರ ಸಂಸ್ಕೃತಿ ದೇಸಿ ಸಂಸ್ಕೃತಿಗಳ ಮುಖಾಮುಖಿ ಈ ನಾಟಕದ ಪ್ರಮುಖ ನೆಲೆಗಳಲ್ಲೊಂದು. ಇದನ್ನು ಅರ್ಜುನ ಸಂಸ್ಕೃತಿ–ಏಕಲವ್ಯ–ಸಂಸ್ಕೃತಿ ಎಂದು ಕರೆಯಬಹುದು. ಅರ್ಜುನ ಸಂಸ್ಕೃತಿ/ಪರಂಪರೆಯಲ್ಲಿ ಅಧಿಕಾರ, ಅಹಂ, ಸ್ವಾರ್ಥ, ಸ್ಪರ್ಧಾಮನೋಭಾವ, ನಯವಂಚಕತನ ಹಾಗೂ ವಿನಾಶಗಳನ್ನು ಕಂಡರೆ, ಏಕಲವ್ಯನ ಪರಂಪರೆಯಲ್ಲಿ ಮುಗ್ಧತೆ,

ಶ್ರದ್ಧೆ, ಪೋಷಣೆಗಳನ್ನು ಕಾಣುತ್ತೇವೆ. 'ಬೆರಳ್ಗೆ ಕೊರಳ್' ನಾಟಕದಲ್ಲಿ ಕುವೆಂಪು ಅವರ ಕಲ್ಪನೆಯ ದರ್ಶನ ನೀಡಲು ಪ್ರಯತ್ನಿಸಿರುವುದು ಎರಡು ಸಂಗತಿಗಳಲ್ಲಿ ಮೊದಲನೆಯದು ಅವರು ದ್ರೋಣನ ಪಾತ್ರದಲ್ಲಿ ಮಾಡಿಕೊಂಡಿರುವ ಬದಲಾವಣೆ ಮತ್ತೊಂದು ಏಕಲವ್ಯನ ತಾಯಿಯ ಪಾತ್ರಸೃಷ್ಟಿ. ಏಕಲವ್ಯನ ಬದುಕನ್ನು ರೂಪಿಸಿರುವ ಇವರಿಬ್ಬರೇ ನಾಟಕದ ಪ್ರಧಾನ ಪಾತ್ರಗಳು.

ವ್ಯಾಧ ಪುತ್ರನಾದ ಏಕಲವ್ಯನಿಗೆ ದ್ರೋಣಾಚಾರ್ಯರಲ್ಲಿಯೇ ವಿದ್ಯೆ ಕಲಿಯಬೇಕೆಂಬ ಹಂಬಲ ದ್ವಿಗುಣವಾಗುತ್ತದೆ. ತನ್ನ ಆಕಾಂಕ್ಷೆಯನ್ನು ತಂದೆ ಹಿರಣ್ಯಧನುವಿನಲ್ಲಿ ಹೇಳಿಕೊಳ್ಳುತ್ತಾನೆ. ಆಗ ಆತ "ಅವರ್ ಪಾರ್ವರ್... ಬಿಯದಗಳ್ ಓವಜಗೆಯಲ್ಕೆ ಒಪ್ಪರ್..." ಎಂದು ಹೇಳುತ್ತಾನೆ. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ತಳಸಮುದಾಯದವರಿಗೆ ವಿದ್ಯೆ ಕಲಿಯುವ ಅವಕಾಶವಿಲ್ಲ. ಅವರಿಗೆ ಕಲಿಯುವ ಹಂಬಲವಿದ್ದರೂ ಕಲಿಸುವ ಸವರ್ಣೀಯರು ಒಪ್ಪದಿರುವುದು ರೂಢಿಗತವಾಗಿ ಬಂದಿರುವುದು ವಿಷಾದನೀಯ. ವಿದ್ಯೆ ಕಲಿಯುವ ಹಕ್ಕು ಶೂದ್ರರಿಗಿಲ್ಲ. ಅದು ಮೇಲ್ವರ್ಗದವರಿಗೆ ಮಾತ್ರ ಮೀಸಲು ಎಂಬ ಪರಂಪರೆಯಿಂದ ಬಂದ ರೂಢಿಯೊಂದನ್ನು ಕುವೆಂಪು ಮುರಿಯಲೆತ್ನಿಸುವ ಮೂಲಕ ಆ ವ್ಯವಸ್ಥೆಗೆ ಪ್ರತಿರೋಧ ತೋರಿರುವುದು ಇಲ್ಲಿ ಕಂಡುಬರುತ್ತದೆ. ಅರ್ಜುನ ಇದಕ್ಕೆ ಒಪ್ಪದಿದ್ದರೂ ದ್ರೋಣರು ತಮ್ಮ ಬಳಿ ಇಟ್ಟುಕೊಂಡು ಏಕಲವ್ಯನಿಗೆ ವಿದ್ಯೆ ಕಲಿಸುವ ಸನ್ನಿವೇಶದ ಮೂಲಕ ಕುವೆಂಪು ಪರಿವರ್ತನೆಯನ್ನು ಮಾಡಲೆತ್ನಿಸಿರುವುದು ಸ್ತುತ್ಯರ್ಹ. ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯೆ ಸಾರ್ವತ್ರಿಕವಾದುದು ಎಂಬುದನ್ನು ಇಲ್ಲಿ ಎತ್ತಿ ಹಿಡಿಯಲಾಗಿದೆ. ಏಕಲವ್ಯ ತನ್ನ ತಂದೆಯ ಮರಣದಿಂದ ವಿದ್ಯೆ ಕಲಿಯುವುದನ್ನು ಅರ್ಧಕ್ಕೇ ಬಿಟ್ಟುಹೋಗಿ ಕಾಡಿನಲ್ಲಿ ದ್ರೋಣಾಚಾರ್ಯರ ಮೂರ್ತಿಯೊಂದನ್ನು ರಚಿಸಿ ಎಲ್ಲ ಬಗೆಯ ಬಿಲ್ವಿದ್ಯೆಯಲ್ಲಿ ಪಾರಂಗತನಾಗುತ್ತಾನೆ. ಆ ಮೂಲಕ ಪ್ರತಿಭೆ ಅನ್ನುವುದು ಸಾರ್ವತ್ರಿಕವಾದುದು. ಆದರೆ ಕೆಲವೊಂದು ಕಾರಣಗಳನ್ನು ನೀಡುವ ಮೂಲಕ ಶೂದ್ರರ ಪ್ರತಿಭೆಯನ್ನು ಕಡೆಗಣಿಸುತ್ತ ಬಂದಿರುವುದಕ್ಕೆ ಚರಿತ್ರೆಯಲ್ಲಿ ನಿದರ್ಶನಗಳಿವೆ. ಇದಕ್ಕೆ ಪೂರಕವೆಂಬಂತೆ ಅರ್ಜುನನ ಪಾತ್ರದ ನಡವಳಿಕೆಯಲ್ಲಿ ಗುರುತಿಸಬಹುದು. ಇಂಥ ಸಂದರ್ಭ ಸನ್ನಿವೇಶಗಳ ಮೂಲಕ ನಮ್ಮ ಪರಂಪರೆಯನ್ನು ತೆರೆದಿಡುವ ಅದನ್ನು ವಿರೋಧಿಸುವ ಪರಿಷ್ಕರಿಸುವ ಕಾರ್ಯ ಸ್ಪಷ್ಟವಾಗಿದೆ. ಕಾಡಿನಲ್ಲಿ ಸ್ವತಂತ್ರವಾಗಿ ಬೆಳೆದ ಜನಗಳ ಮುಗ್ಧತೆ, ಶ್ರದ್ಧೆ, ಪೋಷಣೆಯ ಪ್ರವೃತ್ತಿ ಮುಂತಾದ ಗುಣಗಳನ್ನು ಏಕಲವ್ಯನ ಪಾತ್ರದಲ್ಲಿ ಎರಕ ಹೊಯ್ದಿದ್ದಾರೆ. ಹೀಗೆ ಏಕಲವ್ಯನ ಕಾಡು ಹಾಗೂ ಅರ್ಜುನನ ನಾಡು ಸಂಸ್ಕೃತಿ ಅರ್ಜುನನೊಂದಿಗೆ ಮುಖಾಮುಖಿಯಾಗುವ ಮೂಲಕ ರೂಢಿಗತ ಮೌಲ್ಯಗಳಿಗೆ ಪ್ರತಿರೋಧ ಒಡ್ಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಅರ್ಜುನ ಏಕಲವ್ಯನ ಬಿಲ್ವಿದ್ಯೆಗೆ ಮತ್ಸರಪಟ್ಟು, ಅವನನ್ನು ನೇರವಾಗಿ ವಿರೋಧಿಸುವುದು ಅವಮಾನವೆಂದು ಬಗೆದು ದ್ರೋಣರನ್ನು ಕಾಡಿಗೆ ಕರೆತರುವ ಸನ್ನಿವೇಶ ಅಪೂರ್ವವಾಗಿದೆ. ಈ ವಿಷಯ ತಿಳಿದ ಶಿಷ್ಯ ಏಕಲವ್ಯನು ಗುರು ದ್ರೋಣರಿಗೆ ಸಂಭ್ರಮದಿಂದ ಕೊಡುವ ಗೌರವಾತಿಥ್ಯ ನಮ್ಮ ಭಾರತೀಯ ಸುಸಂಸ್ಕೃತ ಗುರು ಶಿಷ್ಯ ಸಂಬಂಧದ ಪ್ರತೀಕವಾಗಿದೆ. ಏಕಲವ್ಯ ತನ್ನ ತಾಯಿಯನ್ನು ಗುರು ಸೇವೆಯಲ್ಲಿ ನಿರತಳಾಗುವಂತೆ ಮಾಡುವ ಬಗೆ ಆತನ ಗುರುಪ್ರೀತಿಯ ಅನನ್ಯತೆಯನ್ನು ಸಾದರಪಡಿಸುತ್ತದೆ. 'ಒಬ್ಬನ ಅಹಂಕಾರವೇ ಮತ್ತೊಬ್ಬನ ಅಹಂಕಾರಕ್ಕೆ ಕಾರಣವಾಗಿ ಕರ್ಮ ಪರಂಪರೆ ಜನ್ಮ ಜನ್ಮಾಂತರಗಳವರೆಗೆ ಬೆನ್ನು ಹತ್ತುತ್ತದೆ' ಎಂಬುದನ್ನು ದ್ರೋಣರ ಪಾತ್ರದ ಮೂಲಕ ಪಡಿಮೂಡಿಸಿದ್ದಾರೆ. ದ್ರೋಣರಿಗೆ ಅವಮಾನ ಮಾಡಿದ ದ್ರುಪದನನ್ನು ಅವಮಾನ ಮಾಡಬೇಕೆಂಬ ಆಸೆಯನ್ನು ಅರ್ಜುನ

ಪೂರೈಸಿರುತ್ತಾನೆ. ಆ ಕಾರಣಕ್ಕಾಗಿಯೇ ಅರ್ಜುನನ ಹಂಗಿಗೆ ದ್ರೋಣ ಒಳಗಾಗುತ್ತಾನೆ. ಅರ್ಜುನನ ಮತ್ಸರವನ್ನು ಶಮನಗೊಳಿಸುವುದಕ್ಕಾಗಿ ಏಕಲವ್ಯನ ಹೆಬ್ಬೆರಳನ್ನು ಆಹುತಿ ತೆಗೆದುಕೊಂಡ ಚಿತ್ರ ಕೊನೆಯ 'ಯಜ್ಞ' ದೃಶ್ಯದಲ್ಲಿ ಅನಾವರಣಗೊಂಡಿದೆ. ಹಾರುವ ಹಕ್ಕಿಯನ್ನು ಹೊಡೆಯಲು ಹೇಳಿದ ದ್ರೋಣನ ಆಜ್ಞೆಗೆ ಪಾಪದ ಲೇಪವಿಲ್ಲದ ಪಕ್ಷಿಯನ್ನು ಕೊಂದು ತನ್ನ ವಿದ್ಯೆಗೆ ಕಳಂಕವನ್ನೇಕೆ ಲೇಪಿಸಿಕೊಳ್ಳಬೇಕೆಂದು ಪ್ರಶ್ನೆ ಮಾಡಿದ್ದು ಗುರು ದ್ರೋಣರಿಗೆ ಏಕಲವ್ಯ ಒಡ್ಡಿದ ಬಹುದೊಡ್ಡ ಪ್ರತಿರೋಧವಾಗಿದೆ. ಶೋಷಿತರ ತ್ಯಾಗ, ಸರ್ವ ಸಮರ್ಪಣ ಭಾವವನ್ನು ಶೋಷಣೆ ಮಾಡುತ್ತ ಬಂದಿರುವ ವಿಚಾರವು ದ್ರೋಣರು ಏಕಲವ್ಯನ ಬಲಗೈ ಹೆಬ್ಬೆರಳನ್ನು ಕೇಳುವ ಮೂಲಕ ಅದನ್ನು ಪ್ರಕಟಪಡಿಸಿದ್ದಾರೆ. 'ನಿನ್ನ ಬೆರಳಿಗೆ ಕೊಳ್ವೊದೊಂದೇ ತೋರ್ಪುದಾ ಬಿದಿ ನನ್ನ ಕೊರಳಂ' ಎಂದು ಹೇಳುವ ದ್ರೋಣರು ಕರ್ಮ ಪರಂಪರೆಯ ಮುನ್ಸೂಚನೆಯನ್ನು ಕೊಟ್ಟಿದ್ದಾರೆ. ಆದರೆ ಏಕಲವ್ಯನ ತಾಯಿ, ಮಗನ ದುರವಸ್ಥೆ ಕಂಡು 'ನನ್ನ ಕಂದನ ಬೆರಳ್ ಬಲಿಯಕ್ಕೆ ಆ ಪಾಪಿಯ ಕೊರಳ್' ಎಂದು ಶಪಿಸುವಲ್ಲಿ ಮಹತ್ತರ ಪ್ರತಿರೋಧ ಪ್ರಕಟವಾಗಿದೆ. ಆದರೆ ಏಕಲವ್ಯ ಮಾತ್ರ 'ಆಗಬಾರದುದಾಯ್ತೆ' ಎಂದು ಮರುಗಿ ತನ್ನ ಅನನ್ಯ ಗುರುಭಕ್ತಿಯನ್ನು ಮೆರೆಯುತ್ತಾನೆ.

ಒಟ್ಟಿನಲ್ಲಿ ಸ್ವತಃ ಕುವೆಂಪುರವರೇ ಶೂದ್ರರ ನೆಲೆಯಲ್ಲಿ ಕಹಿ ಅನುಭವಿಸಿದ್ದು ಆ ಅನುಭವಗಳನ್ನು ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಅನ್ನುವ ಮಾತಿನಂತೆ ಸಮಸಮಾಜ ನಿರ್ಮಿಸುವಲ್ಲಿ ಅವರ ಕೃತಿ ರತ್ನಗಳು ಅಮೂಲ್ಯ ಕಾಣಿಕೆ ನೀಡಿವೆ. ಈ ಹಿನ್ನೆಲೆಯಲ್ಲಿ ಅವರ 'ಜಲಗಾರ', 'ಶೂದ್ರ ತಪಸ್ವಿ', 'ಬೆರಳ್ಗೆ ಕೊರಳ್' ಈ ಮೂರು ನಾಟಕಗಳನ್ನು ಆಯ್ದುಕೊಂಡು ಅವುಗಳಲ್ಲಿ ಕಂಡುಬರುವ ಪರಂಪರೆ ಮತ್ತು ಪ್ರತಿರೋಧದ ನೆಲೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುವ ಪ್ರಯತ್ನ ಮಾಡಲಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಕುವೆಂಪು, (2002), ಜಲಗಾರ, ಮೈಸೂರು: ಉದಯರವಿ ಪ್ರಕಾಶನ.
2. ಕುವೆಂಪು, (1997), ಶೂದ್ರತಪಸ್ವಿ, ಮೈಸೂರು: ಉದಯರವಿ ಪ್ರಕಾಶನ.
3. ಕುವೆಂಪು, (1994), ಬೆರಳ್ಗೆ ಕೊರಳ್, ಮೈಸೂರು: ಉದಯರವಿ ಪ್ರಕಾಶನ.
4. ನರಹಳ್ಳಿ ಬಾಲಸುಬ್ರಹ್ಮಣ್ಯ, (2002), ಕುವೆಂಪು ನಾಟಕಗಳ ಅಧ್ಯಯನ, ಬೆಂಗಳೂರು: ಅಂಕಿತ ಪುಸ್ತಕ.
5. ಸಿ. ಪಿ. ಕೆ., (2010), ಕನ್ನಡ ಕೋಶ, ಮೈಸೂರು: ಚೇತನ ಬುಕ್ ಹೌಸ್.
6. ಮರುಳಸಿದ್ದಪ್ಪ ಕೆ., (1987), ಆಧುನಿಕ ಕನ್ನಡ ನಾಟಕ, ಬೆಂಗಳೂರು: ಅಂಕಿತ ಪುಸ್ತಕ.